MS – 038

# Second Semester B.Com. Examination, May/June 2014
## (Freshers + Repeaters) (2011-12 and Onwards)
## ಕನ್ನಡ ಭಾಷಾ ಪತ್ರಿಕೆ – II
## ಸಾಹಿತ್ಯ ಸಲ್ಲಾಪ – 1

Time : 3 Hours | Max. Marks : 100

I. ಅ) ಈ ಪದ್ಯದ ಭಾವಾರ್ಥವನ್ನು ಬರೆಯಿರಿ : (1×6=6)

ಒಂದೊಂದು ಮನೆಯ ಬಿಡಲೊಂದೊಂದು ಕಾರಣ
ಈ ಸಲದ ಅನುಭವ: ಮನೆವಂತ ಒಳ್ಳೆಯವ
ಅವನ ಹೆಂಡತಿ ಮಗಳು ? ಒಳ್ಳೆಯವರಿರಬೇಕು
''ಮನೆಯ ಬಿಡಿ'' ಎಂದವರು ನಮಗೆ ಹೇಳಿರಲಿಲ್ಲ
ಅವರು ಮಾಡಿದ ಕೆಲಸ ಬೇರೆ !

ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : (2×3=6)

ವಿಶ್ವಾಮಿತ್ರ, ಶಶಿಕಲಾ ವೀರಯ್ಯ ಸ್ವಾಮಿ, ಮಹಾಮನೆ, ಮಾತುಬೆಳ್ಳಿ ಮೌನಬಂಗಾರ.

II. ಅ) ಇವುಗಳಲ್ಲಿ **ಐದು** ಪದಗಳಿಗೆ ಮೂಲ ಪದಗಳನ್ನು ಬರೆಯಿರಿ : (5×1=5)

ಬ್ಯಾಳಿ, ಆಗಾಕಿಲ್ಲ, ಕಳಿಸ್ಯಾನ, ಮನಿ, ಜ್ವತಿಗೆ, ನಮ್ಮಕತಿ, ಕುಂತಾನ.

ಆ) **ಐದು** ಪದಗಳಿಗೆ ಅರ್ಥ ಬರೆಯಿರಿ : (5×1=5)

ಪಾವಟಿಗೆ, ಕೊಳ್ಳೆ, ಸುದತಿ, ದೇವನಿಕಾಯ, ಬೈಗು, ನಿಸೂರು, ಬಾಕು.

ಇ) **ಐದು** ಪದಗಳನ್ನು ಬಿಡಿಸಿ ಬರೆಯಿರಿ : (5×1=5)

ಹತ್ತಾರು, ಕಣ್ಮುಂದೆ, ಸಾಹಿತ್ಯಾಂದೋಳನ, ಹೃತ್ಪೂರ್ವಕ, ಜೀವನಾನುಭವ, ಸತ್ಯಾಗ್ರಹ, ಮೇಲ್ಜಾತಿ.

ಈ) ಕಲೆಗಾರ, ಹಣವಂತ – ಈ ಮಾದರಿಯ **ಐದು** ಪದಗಳನ್ನು ಸ್ವಂತವಾಗಿ ರಚಿಸಿ. (5×1=5)

III. ಇವುಗಳಲ್ಲಿ **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : (4×5=20)

1) ದಲಿತರು, ಶೂದ್ರರು ಮೀಸಲಾತಿಯ ಭ್ರಮೆಯಿಂದ ಹೊರಬರಬೇಕೆಂದು ತೇಜಸ್ವಿಯವರು ಹೇಳಲು ಕಾರಣವೇನು ?

2) ಎಮ್ಮೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?

3) ಲಲಿತಾಂಗ ಯಾರು ? ಅವನ ದುಃಖಕ್ಕೆ ಕಾರಣವೇನು ?

P.T.O.

4) ಶಶಿಕಲಾ ವೀರಯ್ಯಸ್ವಾಮಿಯವರು ತಮ್ಮ ತಂದೆಯನ್ನು ಕರ್ಮಯೋಗಿ ಎಂದು ಕರೆಯಲು ಕಾರಣವೇನು ?

5) ಅಜ್ಜಿಸಾಬಿಯ ಸ್ವಭಾವ ಎಂತಹುದು ?

6) ಮಾದೇವನಿಗೆ ತನ್ನ ತಂದೆಯ ಕೆಲಸ ದೊರೆಯಲು ಕಾರಣವೇನು ?

IV. ಇವುಗಳಿಗೆ ವಿವರವಾಗಿ ಉತ್ತರಿಸಿ : **(4×12=48)**

1) ಸಂಪ್ರದಾಯಸ್ಥ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ನಿರೂಪಕ ತನ್ನ ವಿವಾಹದ ಬಗ್ಗೆ ಕಂಡ ಕನಸು ನಿಜವಾಯಿತೇ ? ವಿವರಿಸಿ.

**ಅಥವಾ**

'ಮನೆಯಿಂದ ಮನೆಗೆ ' ಮತ್ತು 'ಪೆಂಟಯ್ಯನ ಅಂಗಿ' ಕವಿತೆಗಳಲ್ಲಿ ವ್ಯಕ್ತಗೊಂಡಿರುವ ಮಧ್ಯಮವರ್ಗದ ಬದುಕಿನ ಬವಣೆಯನ್ನು ವಿವರಿಸಿ.

2) ಆರ್ಥಿಕ ಉದಾರೀಕರಣ ಸಾಹಿತ್ಯ ಮತ್ತು ಜೀವನ ಮೌಲ್ಯಗಳ ಮೇಲೆ ಯಾವ ರೀತಿ ಪರಿಣಾಮ ಬೀರಿದೆ ? 'ಸಮಕಾಲೀನ ಸವಾಲುಗಳು' – ಲೇಖನದ ಹಿನ್ನೆಲೆಯಲ್ಲಿ ವಿವರಿಸಿ.

**ಅಥವಾ**

ಗಾಂಧೀಜಿಯವರ ಅವಮಾನ ಮತ್ತು ದುಃಖಕ್ಕೆ ಕಾರಣವಾದ ಘಟನೆಗಳು ಯಾವುವು ? ವಿವರಿಸಿ.

3) ಶಿಕಾರಿಯನ್ನು ಅಜ್ಜಿಸಾಬಿ ಮತ್ತು ಹನೀಫ್ ಸಾಹೇಬರು ಪರಿಭಾವಿಸುವ ಬಗೆಯನ್ನು ವಿವರಿಸಿ.

**ಅಥವಾ**

ಲೇಖಕರ ಮನೆಯ ಎಮ್ಮೆಯ ವಿಶೇಷತೆಗಳೇನು ? ವಿವರಿಸಿ.

4) ''ಪುಂಡರ‍್ಯಾಕಬೇಕು ? ಅವರ ಕಡೆ ಸೈನ್ಯ ಐತೆಲ್ಲಪ್ಪ?'' – ಈ ಮಾತಿನ ಹಿನ್ನೆಲೆಯಲ್ಲಿ ಪ್ರಭುತ್ವದ ಹಿಂಸೆ ಮತ್ತು ಕಲ್ಯಾಣದ ಅರಾಜಕತೆಯನ್ನು ವಿಶದಪಡಿಸಿ.

**ಅಥವಾ**

ಕಾಶವ್ವ, ಹರಿಹರ ಪಂಡಿತ, ಕಳ್ಳ ಚಿಕ್ಕಯ್ಯ – ಇವರಲ್ಲಿ ಇಬ್ಬರ ಪಾತ್ರಗಳನ್ನು ಪರಿಚಯಿಸಿ.

---